**All India Radio: Bangalore**
**National Bulletin In Kannada**
**22.09.2026 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಹಿರಿಯ ನಟ ಅನಂತ್ ನಾಗ್ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ
2. ನವದೆಹಲಿಯಲ್ಲಿಂದು '೯ನೇ ಭಾರತ ಅಂತಾರಾಷ್ಟ್ರೀಯ ಜಲ ಸಪ್ತಾಹ-೨೦೨೬'ಕ್ಕೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಚಾಲನೆ
3. ಭಾರತ-ಜಪಾನ್ ವಾಯುಪಡೆಗಳ ನಡುವಿನ 'ವೀರ್ ಗಾರ್ಡಿಯನ್ ೨೦೨೬' ಸಮರಾಭ್ಯಾಸ ಜೋಧ್‌ಪುರದಲ್ಲಿಂದು ಸಂಪನ್ನ
4. ಏಷ್ಯನ್ ಗೇಮ್ಸ್: ಭಾರತೀಯ ಮಹಿಳಾ ಕ್ರಿಕೆಟ್ ತಂಡಕ್ಕೆ ಚೊಚ್ಚಲ ಚಿನ್ನದ ಪದಕ

<><><><>

ಗುಜರಾತ್‌ನ ಏಕ್ತಾನಗರದಲ್ಲಿಂದು ನಡೆದ ೭೧ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಿರಿಯ ನಟ ಅನಂತ್ ನಾಗ್ ಅವರಿಗೆ ೨೦೨೪ನೇ ಸಾಲಿನ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರದಾನ ಮಾಡಿದರು. ಕನ್ನಡದ 'ಮಿಥ್ಯ' ಚಿತ್ರ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ, ಇದೇ ಚಿತ್ರದ ನಟನೆಗಾಗಿ ರೂಪಶ್ರೀ ವರ್ಕಾಡಿ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಹಾಗೂ ಅತೀಶ್ ಎಸ್. ಶೆಟ್ಟಿ ಅವರಿಗೆ ಅತ್ಯುತ್ತಮ ಬಾಲನಟ ಪ್ರಶಸ್ತಿಯನ್ನು ರಾಷ್ಟ್ರಪತಿಯವರು ಪ್ರದಾನ ಮಾಡಿದರು. ಇದೇ ವೇಳೆ, ಶಿವಧ್ವಜ್ ಶೆಟ್ಟಿ ನಿರ್ದೇಶನದ 'ಇಂಬು' ಅತ್ಯುತ್ತಮ ತುಳು ಚಿತ್ರ ಪ್ರಶಸ್ತಿ ಪಡೆದುಕೊಂಡಿದೆ. ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಗೆ 'ಆರ್ಟಿಕಲ್ ೩೭೦', ಇದೇ ಚಿತ್ರದ ಅಭಿನಯಕ್ಕಾಗಿ ಯಾಮಿ ಗೌತಮ್ ಅತ್ಯುತ್ತಮ ನಟಿ ಪ್ರಶಸ್ತಿ, 'ಬ್ರಹ್ಮಯುಗಂ' ಚಿತ್ರಕ್ಕಾಗಿ ಮಮ್ಮೂಟ್ಟಿ ಹಾಗೂ 'ಚಂದು ಚಾಂಪಿಯನ್' ಚಿತ್ರಕ್ಕಾಗಿ ಕಾರ್ತಿಕ್ ಆರ್ಯನ್ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ, 'ಅಮರನ್' ಚಿತ್ರಕ್ಕಾಗಿ ರಾಜ್‌ಕುಮಾರ್ ಪೆರಿಯಸಾಮಿ ಅವರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ, 'ಕಲ್ಕಿ ೨೮೯೮ ಎಡಿ' ಚಿತ್ರಕ್ಕೆ ಅತ್ಯುತ್ತಮ ಮನರಂಜನೆ ನೀಡುವ ಜನಪ್ರಿಯ ಚಲನಚಿತ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು. 'ಸ್ವಾತಂತ್ರ್ಯ ವೀರ್ ಸಾವರ್ಕರ್' ಚಿತ್ರದ ಮೂಲಕ ರಣದೀಪ್ ಹೂಡಾ ಅತ್ಯುತ್ತಮ ಚೊಚ್ಚಲ ನಿರ್ದೇಶಕ ಪ್ರಶಸ್ತಿ, ನಾನ್ ಫೀಚರ್ ಫಿಲ್ಮ್ ವಿಭಾಗದಲ್ಲಿ ಮರಾಠಿ ಚಿತ್ರ 'ಭಂಗಾರ್'ಗೆ ಅತ್ಯುತ್ತಮ ಚಿತ್ರ ಪ್ರಶಸ್ತಿ, 'ಸ್ಟ್ಯಾಚ್ಯೂ ಆಫ್ ಯೂನಿಟಿ - ಏಕ್ತಾ ಕಾ ಪ್ರತೀಕ್' ಚಿತ್ರಕ್ಕಾಗಿ ಆನಂದ್ ಎಲ್. ರೈ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ, ಸಂತಾಲಿ ಭಾಷೆಯ 'ಅಂಗೆನ್' ಚಿತ್ರಕ್ಕಾಗಿ ರವಿ ರಾಜ್ ಮುರ್ಮು ಅವರಿಗೆ ನಾನ್ ಫೀಚರ್ ಫಿಲ್ಮ್ ವಿಭಾಗದ ಅತ್ಯುತ್ತಮ ಚೊಚ್ಚಲ ನಿರ್ದೇಶಕ ಪ್ರಶಸ್ತಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಶಸ್ತಿ ಪ್ರದಾನ ಮಾಡಿದರು. ೧೯೫೪ರಲ್ಲಿ ಸ್ಥಾಪನೆಯಾದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ದೇಶದ ಅತ್ಯುನ್ನತ ಚಲನಚಿತ್ರ ಪ್ರಶಸ್ತಿಗಳಾಗಿದ್ದು, ಚಲನಚಿತ್ರ, ನಾನ್ ಪೀಚರ್ ಹಾಗೂ ಚಲನಚಿತ್ರ ಕುರಿತ ಬರಹ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಕಲೆ ಮತ್ತು ತಾಂತ್ರಿಕ ಶ್ರೇಷ್ಠತೆಯನ್ನು ಗುರುತಿಸುತ್ತವೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಪ್ರಮುಖ ನೀತಿ ಉಪಕ್ರಮದ ಅಂಗವಾಗಿ ಇದೇ ಮೊದಲ ಬಾರಿಗೆ ರಾಷ್ಟ್ರ ರಾಜಧಾನಿಯ ಹೊರಗೆ ಈ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

<><><><>

ನವದೆಹಲಿಯಲ್ಲಿ ಇಂದು '೯ನೇ ಭಾರತ ಅಂತಾರಾಷ್ಟ್ರೀಯ ಜಲ ಸಪ್ತಾಹ-೨೦೨೬'ಕ್ಕೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ನೀರಿನ ಮಿತಬಳಕೆ ಮತ್ತು ಸಂರಕ್ಷಣೆಯ ಅಗತ್ಯವನ್ನು ಒತ್ತಿ ಹೇಳಿದರು. ತಾಂತ್ರಿಕ ನಾವೀನ್ಯತೆ, ಸೂಕ್ತ ನೀತಿಗಳು, ವೈಜ್ಞಾನಿಕ ಜ್ಞಾನ, ಸ್ಥಳೀಯ ಅನುಭವ ಮತ್ತು ಸಮುದಾಯದ ಭಾಗವಹಿಸುವಿಕೆಯನ್ನು ಒಗ್ಗೂಡಿಸುವ ಬಹು ಆಯಾಮದ ವಿಧಾನದ ಅಗತ್ಯವಿದೆ. ಜಲ ಸಂಪನ್ಮೂಲಗಳ ಸುಸ್ಥಿರ, ನ್ಯಾಯಯುತ ಮತ್ತು ಪರಿಣಾಮಕಾರಿ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಇಂತಹ ಸಹಕಾರವು, ಆಡಳಿತಾತ್ಮಕ ಮತ್ತು ಭೌಗೋಳಿಕ ಗಡಿಗಳನ್ನು ಮೀರಿ ವಿಸ್ತರಿಸಬೇಕು ಎಂದು ಅವರು

ಹೇಳಿದರು. ಅತಿಯಾದ ಮಳೆ ಹಾಗೂ ದೀರ್ಘಕಾಲದ ಒಣ ಹವಾಮಾನದ ಅವಧಿಗಳನ್ನು ನಿರ್ವಹಿಸಬಲ್ಲ ವ್ಯವಸ್ಥೆಗಳ ಅಗತ್ಯವಿದೆ. ಜಲ ನಿರ್ವಹಣೆಯ ಸಮಗ್ರ ವಿಧಾನದ ಭಾಗವಾಗಿ ನದಿ ಪಾತ್ರದ ನಿರ್ವಹಣೆ, ಅಂತರ್ಜಲ ಮರುಪೂರಣ, ಮಳೆನೀರು ಕೊಯ್ಲು ಮತ್ತು ಸಮರ್ಥ ನೀರಾವರಿ ಪದ್ಧತಿಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಒತ್ತಿ ಹೇಳಿದರು. ಈ ವೇಳೆ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಉಪಸ್ಥಿತರಿದ್ದರು.

<><><><>

ಭಾರತೀಯ ವಾಯುಪಡೆ ಮತ್ತು ಜಪಾನ್ ವಾಯು ರಕ್ಷಣಾ ಪಡೆ ನಡುವೆ ಜೋಧ್‌ಪುರದ ವಾಯು ನೆಲೆಯಲ್ಲಿ ನಡೆದ ದ್ವಿಪಕ್ಷೀಯ ಸಮರಾಭ್ಯಾಸ 'ವೀರ್ ಗಾರ್ಡಿಯನ್ ೨೦೨೬' ಇಂದು ಸಂಪನ್ನಗೊಂಡಿತು. ಈ ಸಮರಾಭ್ಯಾಸ ಪರಸ್ಪರ ಕಾರ್ಯಸಾಧ್ಯತೆಯನ್ನು ಹೆಚ್ಚಿಸಲು ಮತ್ತು ಎರಡೂ ದೇಶಗಳ ವಾಯುಪಡೆಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆ ಬಲಪಡಿಸಲು ಪ್ರಮುಖ ವೇದಿಕೆಯಾಗಿ ಕಾರ್ಯನಿರ್ವಹಿಸಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಈ ಸಮರಾಭ್ಯಾಸದಲ್ಲಿ, ಭಾರತೀಯ ವಾಯುಪಡೆಯ ಸು-೩೦ ಎಂಕೆಐ, ರಫೇಲ್, ತೇಜಸ್ ಸೇರಿದಂತೆ ಹಲವು ಯುದ್ಧ ವಿಮಾನ ವಿಮಾನಗಳನ್ನು ನಿಯೋಜಿಸಲಾಗಿತ್ತು. ಜಪಾನ್ ವಾಯು ರಕ್ಷಣಾ ಪಡೆ ಎಫ್-೨ಎ ಯುದ್ಧ ವಿಮಾನದೊಂದಿಗೆ ಭಾಗವಹಿಸಿತ್ತು. ೧೪ ದಿನಗಳ ಜಂಟಿ ತರಬೇತಿಯ ಸಮಯದಲ್ಲಿ, ಎರಡೂ ಪಡೆಗಳು ವಿವಿಧ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ್ದವು. ಈ ಸಮರಾಭ್ಯಾಸ ಎರಡು ವಾಯುಪಡೆಗಳ ನಡುವಿನ ಶಾಶ್ವತ ಸ್ನೇಹ ಮತ್ತು ವೃತ್ತಿಪರ ಸೌಹಾರ್ದತೆಗೆ ಸಾಕ್ಷಿಯಾಗಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

<><><><>

ಭಾರತದ ಮುಂದಿನ ಹಂತದ ಬೆಳವಣಿಗೆಯು ಗುಣಮಟ್ಟದ ಮೇಲೆ ನಿರ್ಮಾಣವಾಗಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರತಿಪಾದಿಸಿದ್ದಾರೆ. ನವದೆಹಲಿಯಲ್ಲಿ ಇಂದು ನಡೆದ ಅಖಿಲ ಭಾರತ ನಿರ್ವಹಣಾ ಸಂಘದ ೫೩ ನೇ ರಾಷ್ಟ್ರೀಯ ನಿರ್ವಹಣಾ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ಪ್ರತಿಯೊಂದು ಕಾರ್ಖಾನೆಯು ಮಂಡಳಿ ಕೊಠಡಿ, ಸೇವಾ ಕೇಂದ್ರ, ಸಂಶೋಧನೆ ಮತ್ತು ಅಭಿವೃದ್ಧಿ ತಂಡ, ಉನ್ನತ ಗುಣಮಟ್ಟ ಮತ್ತು ಹೆಚ್ಚಿನ ವಿಶ್ವಾಸಾರ್ಹತೆಯನ್ನು ಗುರಿಯಾಗಿರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ದೇಶಾದ್ಯಂತ 'ಸೇವಾ ಸಂಕಲ್ಪ ಅಭಿಯಾನ' ನಡೆಯುತ್ತಿದೆ. 'ಜನ ಸೇವೆಯೇ ದೇಶ ಸೇವೆ' ಎಂಬ ಮಂತ್ರದಡಿ ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ ೨೦೪೭ರ ವೇಳೆಗೆ ವಿಕಸಿತ ಭಾರತದ ಗುರಿ ಸಾಧನೆಯತ್ತ ಸಾಗುತ್ತಿದೆ. ಎಲ್ಲರನ್ನೊಳಗೊಂಡ ಅಭಿವೃದ್ಧಿ ಮತ್ತು ಸಾಮಾಜಿಕ ಸಬಲೀಕರಣದ ಮೂಲಕ ದೇಶದ ಜನರ ಜೀವನದಲ್ಲಿ ಮಹತ್ವದ ಪರಿವರ್ತನೆ ತರಲಾಗುತ್ತಿದೆ. ಅದರ ಭಾಗವಾಗಿ ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦' ಕುರಿತ ಒಂದು ನೋಟ ಇಲ್ಲಿದೆ. 'ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦', ದೇಶದ ಶೈಕ್ಷಣಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮರುರೂಪಿಸಿದೆ. ೨೦೨೦ ರ ಜುಲೈ ೨೯ ರಂದು ಕೇಂದ್ರ ಸಂಪುಟದ ಅನುಮೋದನೆ ಪಡೆದ ಈ ನೂತನ ನೀತಿಯು, ಹಳೆಯ ಶಾಲಾ ಚೌಕಟ್ಟಿನ ಬದಲಿಗೆ '೫+೩+೩+೪' ಎಂಬ ನೂತನ ಶೈಕ್ಷಣಿಕ ವಿನ್ಯಾಸವನ್ನು ಜಾರಿಗೆ ತಂದಿದೆ. ೩ ರಿಂದ ೧೮ ವರ್ಷ ವಯಸ್ಸಿನ ಮಕ್ಕಳನ್ನು ಒಳಗೊಳ್ಳುವ ಈ ವ್ಯವಸ್ಥೆಯು, ಮಗುವಿನ ಆರಂಭಿಕ ಬಾಲ್ಯದ ಕಲಿಕಾ ವರ್ಷಗಳನ್ನು ಪ್ರಥಮ ಬಾರಿಗೆ ದೇಶದ ಅಧಿಕೃತ ಶಿಕ್ಷಣ ವ್ಯವಸ್ಥೆಯ ವ್ಯಾಪ್ತಿಗೆ ತಂದಿದೆ. ಪ್ರಮುಖವಾಗಿ, ಕನಿಷ್ಠ ೫ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಸ್ಥಳೀಯ ಭಾಷೆಯನ್ನೇ ಬೋಧನಾ ಮಾಧ್ಯಮವನ್ನಾಗಿ ಮಾಡುವುದಕ್ಕೆ ಈ ನೀತಿಯಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ಹತ್ತನೇ ತರಗತಿಯ ನಂತರ ವಿದ್ಯಾರ್ಥಿಗಳನ್ನು ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಎಂಬ ಕಟ್ಟುನಿಟ್ಟಿನ ಚೌಕಟ್ಟುಗಳಿಗೆ ಸೀಮಿತಗೊಳಿಸುತ್ತಿದ್ದ ಸಾಂಪ್ರದಾಯಿಕ ಪದ್ಧತಿಯನ್ನು ಈ ನೀತಿಯು ಬದಲಿಸಿದ್ದು, ಶೈಕ್ಷಣಿಕ ಮತ್ತು ವೃತ್ತಿಪರ ವಿಷಯಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

<><><><>

ಜಪಾನ್‌ನ ಐಚಿ ಪ್ರಿಫೆಕ್ಚರಲ್ ಕೊರೋಗಿ ಸ್ಪೋರ್ಟ್ಸ್ ಕ್ರೀಡಾಂಗಣದಲ್ಲಿ ನಡೆದ ೨೦೨೪ರ ಏಷ್ಯನ್ ಗೇಮ್ಸ್‌ನ ಮಹಿಳಾ ಕ್ರಿಕೆಟ್ ಫೈನಲ್‌ನಲ್ಲಿ, ಶ್ರೀಲಂಕಾ ವಿರುದ್ಧ ಭರ್ಜರಿಯಾಗಿ ಗೆದ್ದ ಭಾರತ, ತನ್ನ ಚೊಚ್ಚಲ ಚಿನ್ನದ ಪದಕ ತನ್ನದಾಗಿಸಿಕೊಂಡಿದೆ. ಶ್ರೀಲಂಕಾ ತಂಡ ೧೫.೪ ಓವರ್‌ಗಳಲ್ಲಿ ಕೇವಲ ೬೯ ರನ್‌ಗಳಿಗೆ ಆಲೌಟ್ ಆಯಿತು. ಇದರೊಂದಿಗೆ ಭಾರತ, ೧೪೭ ರನ್‌ಗಳ ಬೃಹತ್ ಅಂತರದ ಜಯ ದಾಖಲಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಭಾರತ, ೨೦ ಓವರ್‌ಗಳಲ್ಲಿ ೩ ವಿಕೆಟ್ ನಷ್ಟಕ್ಕೆ ೨೧೬ ರನ್‌ಗಳ ಬೃಹತ್ ಮೊತ್ತ ಕಲೆಹಾಕಿತು. ಸ್ಮೃತಿ ಮಂಧನಾ ೭೯ ರನ್‌ಗಳೊಂದಿಗೆ ಗರಿಷ್ಠ ಸ್ಕೋರರ್ ಎನಿಸಿಕೊಂಡರೆ, ರಿಚಾ ಘೋಷ್ ೪೯ ರನ್‌ಗಳೊಂದಿಗೆ ಅಜೇಯರಾಗಿ ಉಳಿದರು. ಇದೇ ವೇಳೆ ೧೧ ಸಾವಿರ ಅಂತಾರಾಷ್ಟ್ರೀಯ ರನ್‌ಗಳನ್ನು ಪೂರೈಸಿದ ಮೊದಲ ಮಹಿಳಾ ಬ್ಯಾಟರ್ ಎಂಬ ಹೆಗ್ಗಳಿಕೆಗೂ ಸ್ಮೃತಿ ಮಂಧನಾ ಪಾತ್ರರಾದರು.

<><><><>

ಏಷ್ಯನ್ ಗೇಮ್ಸ್‌ನಲ್ಲಿ ಭಾರತೀಯ ಮಹಿಳಾ ಕ್ರಿಕೆಟ್ ತಂಡ, ಚಿನ್ನದ ಪದಕ ಗೆದ್ದಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ, ಆತ್ಮವಿಶ್ವಾಸ, ಕೌಶಲ್ಯ ಮತ್ತು ಅತ್ಯುತ್ತಮ ತಂಡದ ಸಹಕಾರದಿಂದ ಕೂಡಿದ ಪ್ರಭಾವಶಾಲಿ ಪ್ರದರ್ಶನ ಇದಾಗಿತ್ತು. ಮಹಿಳಾ ಕ್ರಿಕೆಟ್ ತಂಡ, ದೇಶಕ್ಕೆ ಹೆಮ್ಮೆ ತಂದಿದೆ ಮತ್ತು ದೇಶಾದ್ಯಂತ ಅಸಂಖ್ಯಾತ ಯುವ ಕ್ರಿಕೆಟಿಗರಿಗೆ ಸ್ಫೂರ್ತಿಯಾಗಲಿದೆ ಎಂದು ಹೇಳಿದ್ದಾರೆ.

<><><><>

ಜಪಾನ್‌ನ ನಗೋಯಾದಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್ ಬ್ಯಾಡ್ಮಿಂಟನ್ ಕ್ವಾರ್ಟರ್ ಫೈನಲ್‌ನಲ್ಲಿ ಜಪಾನ್ ವಿರುದ್ಧ ೩-೦ ಅಂತರದ ಗೆಲುವು ಸಾಧಿಸಿರುವ ಭಾರತೀಯ ಪುರುಷರ ತಂಡ ಪದಕ ಖಚಿತಪಡಿಸಿದೆ. ಆರಂಭಿಕ ಪಂದ್ಯದಲ್ಲಿ ೧೪-೧೯ ಅಂತರದ ಹಿನ್ನಡೆಯಿಂದಾಗಿ ಲಕ್ಷ್ಯ ಸೇನ್ ಸೋಲಿನ ಅಂಚಿನಲ್ಲಿದ್ದರು. ಆದಾಗ್ಯೂ, ಅವರು ಅದ್ಭುತವಾಗಿ ಪುಟಿದೆದ್ದು, ಸತತ ಏಳು ಅಂಕಗಳನ್ನು ಗಳಿಸುವ ಮೂಲಕ ವಿಶ್ವದ ೭ನೇ ಶ್ರೇಯಾಂಕದ ಆಟಗಾರ ಕೋಡೈ ನರಾವೊಕಾ ಅವರನ್ನು ೧೧-೨೧, ೨೧-೫, ೨೧-೧೯ ಅಂತರದಿಂದ ಸೋಲಿಸಿ, ಭಾರತಕ್ಕೆ ೧-೦ ಮುನ್ನಡೆ ತಂದುಕೊಟ್ಟರು. ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ, ಮೊದಲ ಡಬಲ್ಸ್ ಪಂದ್ಯದಲ್ಲಿ ಹೋಕಿ ಟಕುರೋ ಮತ್ತು ಕೊಬಯಾಶಿ ಯುಗೊ ವಿರುದ್ಧ ೨೧-೧೮, ೨೪-೨೨ ಅಂತರದ ಜಯ ಸಾಧಿಸಿದರು. ಈ ಮೂಲಕ ಭಾರತ ೨-೦ ಮುನ್ನಡೆ ಪಡೆಯಿತು. ನಂತರ ಆಯುಷ್ ಶೆಟ್ಟಿ, ವಿಶ್ವದ ೧೬ನೇ ಶ್ರೇಯಾಂಕದ ಕೋಕಿ ವಟನಾಬೆ ಅವರನ್ನು ೨೧-೧೦, ೨೧-೧೯ ಅಂತರದಿಂದ ಮಣಿಸುವ ಮೂಲಕ ಭಾರತಕ್ಕೆ ಪದಕ ಖಚಿತಪಡಿಸಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>